**ಅ. ದಾ. ಸಂ : 324/2015**
**ಡಿ. ಡಬ್ಲ್ಯೂ : 01**

**ದಿನಾಂಕ : 07-06-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು:- ವಾದಿಯ ಪರ** ಶ್ರೀ.ಟಿ.ಕೆ.ಹೆಚ್ **,**ವಕೀಲರಿಂದ :-

ಸಿದ್ದನಂಜಪ್ಪ ಮತ್ತು ಸಿದ್ದಲಿಂಗಮ್ಮನವರ ಮಗನಾದ ನಾಗರಾಜುರವರು ಬದುಕಿದ್ದಾರೆ ಎಂದರೆ ಸರಿ. ಈ ದಾವೆಯಲ್ಲಿ ನಾಗರಾಜುರವರನ್ನು ವಿಚಾರಣೆ ಮಾಡುತ್ತೀರಾ ಎಂದು ಕೇಳಿದಾಗ, ಸಾಕ್ಷಿಯ ವಕೀಲರು ನಾಗರಾಜುರವರು 2 -3 ತಿಂಗಳುಗಳ ಹಿಂದೆ ಮೃತಪಟ್ಟಿರುತ್ತಾರೆ ಎಂದು ತಿಳಿಸಿದರು. 4 ನೇ ಪ್ರತಿವಾದಿಗೆ ಹೆಂಡತಿ ಮಕ್ಕಳು ಇದ್ದರಾ ಎಂದರೆ ನನಗೆ ಗೊತ್ತಿಲ್ಲ. ನಿಡಿ-2 ಕ್ಕೆ 4 ನೇ ಪ್ರತಿವಾದಿಯ ಸಹೋದರಿಯವರು ಸಹಿ ಮಾಡಿರುವುದಿಲ್ಲ, ಆದ ಕಾರಣ ನಿಡಿ-2 ಊರ್ಜಿತವಲ್ಲ ಎಂದರೆ ವಂಶವೃಕ್ಷದಲ್ಲಿ ತಪ್ಪಾಗಿರುತ್ತದೆ. ನಾನು ನ್ಯಾಯಾಲಯಕ್ಕೆ ಸರಿಯಾದ ವಂಶವೃಕ್ಷವನ್ನು ಸಲ್ಲಿಸಿರುವುದಿಲ್ಲ. ನಾನು ವಿದ್ಯಾವಂತನು ಮತ್ತು ಇತ್ತೀಚೆಗೆ ಸರ್ವೋಚ್ಚ ನ್ಯಾಯಾಲಯವು ಹೆಣ್ಣು ಮಕ್ಕಳಿಗೂ ಸಮಪಾಲು ಇದೆ ಎಂದು ಆದೇಶ ಹೊರಡಿಸಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ಸಿದ್ದನಂಜಪ್ಪ ಮತ್ತು ಸಿದ್ದಲಿಂಗಮ್ಮನವರ ಆಸ್ತಿಯಲ್ಲಿ ವಾದಿಗಳಿಗೂ ಸಹ ಸಮಪಾಲು ಇದೆ ಅದರ ಬಗ್ಗೆ ಗೊತ್ತಿದ್ದರೂ ಸಹ ಅವರನ್ನು ಮರೇಮಾಚಿ ಸುಳ್ಳು ನಿಡಿ-2 ನ್ನು ಮಾಡಿಸಿಕೊಂಡಿರುತ್ತೇನೆ ಎಂದರೆ ವಂಶವೃಕ್ಷದಲ್ಲಿ ತಪ್ಪಾಗಿರುತ್ತದೆ. ವಾದಿಗಳಿಗೂ ಸಹ ಸಮಪಾಲು ಇದೆ ಎಂಬ ವಿಷಯದ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹ, ವಂಶವೃಕ್ಷದಲ್ಲಿ ತಪ್ಪಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಶುದ್ದ ಕ್ರಯದಾರರಲ್ಲ ಮತ್ತು ನಾನು ಸುಳ್ಳು

ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿ ಸತ್ಯವನ್ನು ಮರೆಮಾಚುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯ ಹೆಂಡತಿ ಮಕ್ಕಳ ಮಾಹಿತಿಯನ್ನು ನ್ಯಾಯಾಲಯಕ್ಕೆ ಕೊಡಲು ನನಗೆ ಯಾವುದೇ ತೊಂದರೆ ಇಲ್ಲ.

**ಮರುವಿಚಾರಣೆ ಇಲ್ಲ:**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ. ಎಂ. ಎಫ್.ಸಿ, ಮಾಗಡಿ.**